**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 511/2024**

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿ ಶಶಿಕುಮಾರ್ ಬಿನ್ ಲೇಟ್ ಶಂಕರ, 33 ವರ್ಷ,
ವಾಸಃ ನಾಯಕರ ಬೀದಿ, ಸುಣ್ಣದ ಕೇರಿ,
ಗುಂಡ್ಲುಪೇಟೆ ಪಟ್ಟಣ.
**ಹಾಲಿ ವಾಸಃ** ಕೆ.ಜಿ.ಕೊಪ್ಪಲು, 1ನೇ ಕ್ರಾಸ್
ಮೈಸೂರು ನಗರ.

**ದೋಷಾರೋಪಣೆ**

ಶ್ರೀ ಬಸವರಾಜ ತಳವಾರ, ಬಿ.ಎ., ಎಲ್ ಎಲ್ ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಯದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ಪಿರ್ಯಾದುದಾರರಿಗೂ ಮತ್ತು ಆರೋಪಿಗೂ ಈ ಹಿಂದಿನಿಂದಲೂ ವೈಷಮ್ಯವಿದ್ದು, ಈ ಹಳೇ ದ್ವೇಷದ ಹಿನ್ನೆಲೆಯಲ್ಲಿ ದಿಃ 04.10.2024 ರಂದು ಸಂಜೆ 6.45 ಗಂಟೆ ಸಮಯದಲ್ಲಿ ಚಾಸಾ–1 ರತ್ನಮ್ಮ ರವರು ಮನೆಯಲ್ಲಿರುವಾಗ್ಯೆ ಆರೋಪಿಯಾದ ನೀವು ಚಾಸಾ–1 ರವರ ಮನೆಯ ಹತ್ತಿರ ಬಂದು ಏಕಾ ಏಕಿ ಚಾಸಾ–1 ರತ್ನಮ್ಮ ರವರ ಮನೆಯ ಬಾಗಿಲಿಗೆ ಒದ್ದು ಮನೆಯ ಒಳಗೆ ಅಕ್ರಮವಾಗಿ ಪ್ರವೇಶ ಮಾಡಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 329(4) ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರತ್ನಮ್ಮ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಚಾಸಾ–1 ರತ್ನಮ್ಮ ರವರಿಗೆ ನಿನ್ನ ಮಗನನ್ನು ಪೊಲೀಸರಿಗೆ ಸಿಗದಂತೆ ಎಲ್ಲಿ ಕಳುಹಿಸಿದ್ದೀಯಾ ಬೋಳಿ ಮಗಳೇ, ಸೂಳೇ ಮಗಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 352 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರತ್ನಮ್ಮ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಕೈಗಳಿಂದ ಚಾಸಾ–1 ರತ್ನಮ್ಮ ರವರ ಕಪಾಲಕ್ಕೆ ಹೊಡೆದು ನೋವುಂಟುಮಾಡಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 115(2) ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ನಾಲ್ಕನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರತ್ನಮ್ಮ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಚಾಸಾ–1 ರತ್ನಮ್ಮ ರವರ ಮನೆಯಿಂದ ಹೊರಬಂದು ರಸ್ತೆಯಲ್ಲಿ ನಿಂತು ಚಾಸಾ–1 ರತ್ನಮ್ಮ ರವರನ್ನು ಅವಾಚ್ಯವಾಗಿ ಸಾರ್ವಜನಿಕ ರಸ್ತೆಯಲ್ಲಿ ಬೈದು ಅವಮಾನಮಾಡಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 74 ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಕೊನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ–1 ರತ್ನಮ್ಮ ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ ಚಾಸಾ–1 ರತ್ನಮ್ಮ ರವರಿಗೆ ಈಗಾಗಲೇ ಕೇಸು ದಾಖಲಾಗಿದ್ದರೂ ಸಹ ನಿಮ್ಮ ಪೊಗರು ಇಳಿದಿರುವುದಿಲ್ಲ, ಇನ್ನೊಮ್ಮೆ ನಮ್ಮ ಕುಟುಂಬದವರ ತಂಟೆಗೆ ಬಂದರೆ ಕೊಲೆ ಮಾಡಿಬಿಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರೆಂದು ಆ ಮೂಲಕ ಭಾರತೀಯ ನ್ಯಾಯಾ ಸಂಹಿತಾ ಕಲಂ 351(2) ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 06.02.2026

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ